ವಾತಾವರಣದಲ್ಲಿ ತನ್ನ ಮಗ ಹೇಗೆ ತಡೆದುಕೊಂಡಿದ್ದನೋ ಯೋಚಿಸುತ್ತಿದ್ದರೆ ಮತ್ತಷ್ಟು ಭಯವಾಗುತ್ತದೆ.

ಎಷ್ಟು ಪ್ರಯತ್ನ ಪಟ್ಟರೂ ನಿದ್ದೆ ಹತ್ತಲಿಲ್ಲ. ಬೆಳಗಿನ ಜಾವದ ವೇಳೆಗೆ ಜೋಂಪು ಹತ್ತುತ್ತಿದೆ. ಎಚ್ಚರವಾಗುವವೇಳೆಗೆ ಬೆಳಗಾಗಿತ್ತು. ಕೋಣೆಯಲ್ಲಿ ಚಂದ್ರು ಮತ್ತು ಇಬ್ಬರೋ ಮೂವರೋ ಮಾತನಾಡಿಕೊಳ್ಳುತ್ತಿದ್ದಾರೆ.

''ನಮ್ಮ ತಾತ ಹಿಂದೆ ಸಂಘ ಕಟ್ಟಿ ದೊರೆಗಳೊಂದಿಗೆ ಹೊಡೆದಾಡಿದ್ದರಂತೆ. ನಮ್ಮ ದೊಡ್ಡಪ್ಪ ನಕ್ಸಲರ ಜೊತೆ ತಿರುಗಾಡಿದ್ದರಂತೆ. ನಮ್ಮ ನಾಗರಾಜು ಅಣ್ಣ ಕೂಡ ಯಾರಿಗೂ ಭಯಪಡುತ್ತಿರಲಿಲ್ಲ...'' ಚಂದ್ರುವಿನ ಮಾತು ಕೇಳಿಸಿತು.

ತಂದೆ, ಗಂಡ ಇಬ್ಬರೂ ಮತ್ತೊಮ್ಮೆ ಸಾವಿತ್ರಿಯ ಮನಸ್ಸಿನಲ್ಲಿ ಮೂಡಿ ದೀರ್ಘ ನಿಟ್ಟುಸಿರು ಬಿಟ್ಟಳು. ಅರಿಯದ ವಯಸ್ಸಿನಲ್ಲಿ ತಂದೆ ಸತ್ತರೂ ಆ ಸಾವಿನ ನೆನಪುಗಳು ಬಹಳ ದಿನ ಕಾಡಿದವು.

ತನ್ನ ತಾಯಿ ರೋದಿಸುತ್ತ, 'ದೊಡ್ಡಿ ಕೊಮುರಯ್ಯನ ಸಾವಿನಿಂದ ರೈತರಿಗೆ, ಕೂಲಿಕಾರರಿಗೆ ಆಗುತ್ತಿದ್ದ ಅನ್ಯಾಯದ ವಿರುದ್ಧ ಹೋರಾಟದ ಕಿಚ್ಚು ಹತ್ತಿತು. ನಿಮ್ಮ ಅಪ್ಪ ಸಂಘಕ್ಕೆ ಸೇರಿದರು. ದೊರೆಗಳು, ಭೂಮಾಲೀಕರು ಪ್ರಾಣ ಭಯದಿಂದ ಪಟ್ಟಣಗಳಿಗೆ ಓಡಿಹೋದರು. ಸ್ವಾತಂತ್ರ್ಯ ಬಂದಮೇಲೆ ಅವರೇ ಕಾಂಗ್ರೆಸ್ ಟೋಪಿ, ಬಾವುಟ ಹಿಡಿದುಕೊಂಡು ನಾಯಕರಾಗಿ ಊರುಗಳಿಗೆ ಬಂದರು. ಹಗೆ ಸಾಧಿಸಿ ನಿಮ್ಮ ಅಪ್ಪನನ್ನು ಊರಿನಿಂದ ಹೊರಗಟ್ಟಿದರು. ಪಟ್ಟಣಗಳಲ್ಲಿ ರಿಕ್ಷಾ ಓಡಿಸಿಕೊಂಡು ಹಸಿವಿನಿಂದ ಸತ್ತನು ಮಗಳೇ ನಿಮ್ಮ ಅಪ್ಪ' ಹೇಳಿದ ಮಾತುಗಳು ನೆನಪಾದವು.

ಚಂದ್ರು ಜೋರಾಗಿ, ''ನಮ್ಮ ದೊಡ್ಡಮ್ಮನನ್ನು ಊರಿನಲ್ಲಿ ಇದ್ದವರಿಗೇ ಮದುವೆ ಮಾಡಿಕೊಟ್ಟರು. ನಮ್ಮ ದೊಡ್ಡಪ್ಪ ತಾವೇ ಸ್ವಂತವಾಗಿ ಹಾಡು ಕಟ್ಟಿ ಹಾಡುತ್ತಿದ್ದರು. ಆಗ ನಕ್ಸಲರು ಜೋರಾಗಿದ್ದರಂತೆ. ನಮ್ಮ ತಾತನಂತೆಯೇ ದೊಡ್ಡಪ್ಪ ಕೂಡ ದೊರೆಗಳನ್ನು ಹಳ್ಳಿಗಳಿಂದ ಪಟ್ಟಣಕ್ಕೆ ಓಡಿಸಿದ್ದರಂತೆ...'' ಹೇಳುತ್ತಲೇ ಇದ್ದಾನೆ. ಆತನ ಮಾತಿನಲ್ಲಿ ಅದು ಹೆಮ್ಮೆಯ ಕೆಲಸವೆಂಬ ಭಾವನೆಯಿದೆ. ಒಂದು ಉದ್ವೇಗವಿದೆ. ಚಂದ್ರು ಇನ್ನೂ ಏನೋ ಹೇಳುತ್ತಿದ್ದಾನೆ.

ಸಾವಿತ್ರಿ ಮಾತ್ರ ಈ ಮಾತು ಕೇಳಿ ಅದನ್ನೇ ಯೋಚಿಸುತ್ತಿದ್ದಾಳೆ. ಪತಿಯನ್ನು ಕಳೆದುಕೊಂಡು ಬಹಳ ವರ್ಷ ಕಳೆದರೂ ಗಾಯ ಇನ್ನೂ ಮಾಸಿಲ್ಲ. ಆ ನೆನಪುಗಳು ಮನಸ್ಸಿನಲ್ಲೇ ಅಡಗಿವೆ.

ಒಂದು ರಾತ್ರಿ ಪತಿ ಹೇಳಿದ ಮಾತುಗಳು, 'ಯೂನಿವರ್ಸಿಟಿ ವಿದ್ಯಾರ್ಥಿಗಳು ಹಳ್ಳಿಗಳಿಗೆ ಬಂದಿದ್ದಾರೆ. ಊರಿಡೀ ಹೋರಾಟಗಳು ನಡೆಯುತ್ತಿವೆ. ಈಗ ನೂರಾರು ಗ್ರಾಮಗಳು ದೊರೆಗಳ ಹಿಡಿತದಿಂದ ವಿಮುಕ್ತಿ ಹೊಂದಿವೆ. ಅವರು ನನ್ನನ್ನು ಕರೆಯುತ್ತಿದ್ದಾರೆ. ನಿರ್ಬಂಧ ಹೆಚ್ಚಾಗಿದೆ... ಹೊರಗೆ ಇರುವುದು ಕೂಡ ಅಪಾಯವೇ...' ನೆನಪಾದವು.

ತಾನು ಬಾಯಿ ಬಾಯಿ ಬಡಿದುಕೊಂಡು ಹೇಳಿದ ಮಾತುಗಳು ನೆನಪಾದವು.

'ಇದೆಲ್ಲ ಬೇಡವೇ ಬೇಡ... ತಂದೆಯನ್ನು ಆಗಲೇ ಕಳೆದುಕೊಂಡೆ. ಈಗ ನಿನ್ನನ್ನು ದೂರ ಮಾಡಿಕೊಳ್ಳುವುದಿಲ್ಲ. ಎರಡು ಮೂರು ವರ್ಷ ಬೊಂಬಾಯಿಗೆ ಹೋಗು... ಎಲ್ಲರೂ ಮರೆತುಹೋಗುತ್ತಾರೆ' ಎನ್ನುತ್ತ ಬಲವಂತ ಮಾಡಿ ಬೊಂಬಾಯಿ ಬಸ್ ಹತ್ತಿಸಿದ್ದು ನೆನಪಾಯಿತು.

ಚಂದ್ರು ಗೆಳೆಯರಿಗೆ ಸಾವಿತ್ರಿಯ ಜೀವನದ ಪರಿಚಯ ಮಾಡುತ್ತಲೇ ಇದ್ದಾನೆ. ಅವರೆಲ್ಲ ಯಾವುದೋ ವಿಷಾದದ ಕತೆಯನ್ನು ಕೇಳುತ್ತಿರುವಂತೆ ಮೌನವಾಗಿ ಕೇಳುತ್ತಿದ್ದಾರೆ. ಅತ್ತಿಂದಿತ್ತ ತಿರುಗಿ ಮುದುರಿಕೊಂಡು ಮಲಗಿದಳು ಸಾವಿತ್ರಿ.

ಪತಿ ಬರೆದ ಕೊನೆಯ ಕಾಗದ ಕಣ್ಣ ಮುಂದೆ ಕದಲುತ್ತಿದೆ. 'ಸಂಗಾತಿಗೆ... ಲಾಲ್ ಸಲಾಮ್. ನಿನ್ನನ್ನು ನೋಡಬೇಕೆನಿಸಿದರೂ ಊರಿಗೆ ಬರಲಾರದ ಪರಿಸ್ಥಿತಿ. ಬೊಂಬಾಯಿಗೆ ಬಂದರೂ